

**ಕುವೆಂಪು**

ಕಲೆ: ಎಸ್.ವಿ. ಹೂಗಾರ್

# ಮನೆಮನೆಯ ತಪಸ್ವಿನಿಗೆ



ಮನೆಮನೆಯಲಿ ನೀನಾಗಿಹೆ ಗೃಹಶ್ರೀ:
ಹೆಸರಿಲ್ಲದ ಹೆಸರು ನಿನಗೆ 'ಗೃಹಸ್ತ್ರೀ'!
ಹೇ ದಿವ್ಯ ಸಾಮಾನ್ಯೆ,
ಹೇ ಭವ್ಯೆ ದೇವಮಾನ್ಯೆ,
ಚಿರಂತನ ಅಕೀರ್ತಿಕನ್ಯೆ,
ಅನ್ನಪೂರ್ಣೆ, ಅಹಂಶೂನ್ಯೆ,
ನಮೋ ನಿನಗೆ ನಿತ್ಯಧನ್ಯೆ!

ರಾಷ್ಟ್ರಸಭಾ ಅಧ್ಯಕ್ಷಿಣಿ
ಶ್ರೀಮತಿ ಆ ಸರೋಜಿನಿ
ಝಾನ್ಸಿರಾಣಿ ಲಕ್ಷ್ಮಿಬಾಯಿ
ಅವರಿಗೆಲ್ಲ ಮಹಾತಾಯಿ
ನೀನೆ ಬಸಿರು, ನೀನೆ ಉಸಿರು,
ನೀನಿದ್ದರೆ ಅವರ ಹೆಸರು!
ಭದ್ರತಾ ಸಮಿತಿಯಲ್ಲಿ
ವಿಜಯಲಕ್ಷ್ಮಿವಾಗ್ಮಿತೆ
ಆಧ್ಯಾತ್ಮಿಕ ಸಂಪತ್ತಿನ
ನಿನ್ನ ಭೂಮದಿದಿರಿನಲ್ಲಿ
ರಾಜಕೀಯದಲ್ಪತೆ!

ಅಡುಗೆ ಮನೆಯೆ ಪರ್ಣಶಾಲೆ;
ಒಲೆಯ ಅಗ್ನಿ ಮಖಜ್ವಾಲೆ!
ಬಿಡುವಿಲ್ಲದ ಕಟು ತಪಸ್ಯೆ;
ಹುಣ್ಣಿಮೆಯೂ ಅಮಾವಾಸ್ಯೆ!
ಆದರೂ ಅದೀನಾಸ್ಯೆ
ನೀನೆ ನಮಗೆ ಧೈರ್ಯ, ಆಶೆ!
ನಿನ್ನ ಪಾದಕಿದೋ ಪೂಜೆ:
ಪೂತ ಕವನ ಧವಳ ಲಾಜೆ!